ಬಾಯಿಗಿಟ್ಟಾಗ ಪ್ಯಾಕೇಜ್ ಡೀಲ್‌ನಂತೆ ದಾಳಿ ಮಾಡುವ ನೆನಪುಗಳು ಎಲ್ಲವೂ ಅಸ್ತಿತ್ವದ ಒಂದು ಭಾಗ ಅಂತ ಭಾಸವಾಗುತ್ತೆ.

ಆದರೂ ಮುಗ್ಧವಾಗಿ ಕಾಣುವ ಅಮ್ಮಂದಿರು ಮಹಾಭಾರತದ ಕುಂತಿಯ ಹಾಗೆ ಸದಾ ರಾಜಕಾರಣದಲ್ಲೇ ಮುಳುಗಿರುತ್ತಾರೆ. ಅಡುಗೆಮನೆಯಲ್ಲಿ ಶುರುವಾಗುವ ರಾಜಕೀಯಗಳು ಸಮುದ್ರ ದಡದಲ್ಲಿ ನಿಂತಾಗ ಮುದ ನೀಡುವ ಹಾಗೆ ಸುಯ್ಯ್ ಎಂದು ಬರುವ ನೊರೆನೊರೆಯ ಅಲೆ ನೆಲದ ಕೆಳಗಿನಿಂದ ಉಸುಕನ್ನು ಜಾರಿಸಿಕೊಂಡು ಹೋದ ಹಾಗೆ, ನಮ್ಮ ಕಾಲಡಿಯ ಉಸುಕನ್ನು ಸರಿಸಿ ಪಾದವನ್ನು ಅಲ್ಲೇ ಮತ್ತಷ್ಟು ಹುದುಗಿಸುವ ವಿದ್ಯಮಾನಗಳು ಎನ್ನುವ ದಿಗ್ದರ್ಶನ ಆಗುವ ಹೊತ್ತಿಗೆ ಅಡುಗೆಮನೆಯ ಪ್ರವೇಶ ಘಟಿಸಿ ನಮ್ಮನ್ನು ಸಂಪೂರ್ಣವಾಗಿ ಆಪೋಶನ ತೆಗೆದುಕೊಂಡಿರುತ್ತದೆ.

ಅಮ್ಮ ಮಗಳು ಒಟ್ಟಿಗೇ ಅಡುಗೆಮನೆಯಲ್ಲಿ ಎದುರಿಸುವ ತಿಕ್ಕಾಟ ಅಪ್ಪ ಮಗ ವ್ಯವಹಾರದಲ್ಲಿ ಎದುರಿಸುವ ತಿಕ್ಕಾಟಕ್ಕೆ ಸಮ ಇರಬಹುದು. ಹಳ್ಳಿ ಬಿಟ್ಟು ಪೇಟೆ ಸೇರಿದ ಮೊದಲನೆ ಪೀಳಿಗೆಯ ಅಮ್ಮಂದಿರು ಅಡುಗೆಮನೆಯಲ್ಲಿ ಯಾವ ಸರ್ವಾಧಿಕಾರಿಗಿಂತ ಕಡಿಮೆ ಹಕ್ಕು ಚಲಾಯಿಸುವುದಿಲ್ಲ. ನಮ್ಮ ಮನೆಗಳಲ್ಲೂ ಹಾಗೇ ಇತ್ತು. ಅಮ್ಮ ಮತ್ತವರ ವಾರಗೆಯವರು ಎಲ್ಲಿಗೋ ಹೋಗಿ ಬಂದರೆ ಒಂದು ಲೋಟ ನೀರು ಕೇಳುವಾಗಲೂ ಅನುಮಾನದಿಂದಲೇ ನಮ್ಮ ಕೈಗಳನ್ನು ನೋಡುತ್ತಿದ್ದರು. ತಮ್ಮ ಹಳ್ಳಿಯ ಮನೆಯ ಕತ್ತಲು ಕಸಗಳನ್ನು ಪೇಟೆಯಲ್ಲಿ ಮೀರುವ ಸತತ ಪ್ರಯತ್ನ ಅದು.

ತಾವೂ ದೊಡ್ಡವರ ಕೈಕೆಳಗೆ ಕೆಲಸ ಕಲಿತಿದ್ದಿವಿ ಅಂತ ನೆನೆಪಿಸಿಕೊಳ್ಳುತ್ತಾ, ಭಾರೀ ಹೊಡೆಸಿಕೊಳ್ತಾ ಇದ್ವಿ ಅನ್ನುವುದನ್ನೂ ಜೊತೆಗೆ ಸೇರಿಸುತ್ತಾ ಆಗಾಗ ಅಡುಗೆ ಮಾಡುವ ಮಕ್ಕಳ ಪ್ರಯತ್ನಕ್ಕೆ ಮಾನಸಿಕ ಸ್ಥಿರತೆ ದೊರಕದ ಹಾಗೆ ನೋಡಿಕೊಳ್ಳುತ್ತಾ ಅವರ ಆತ್ಮವಿಶ್ವಾಸಕ್ಕೆ ಕಲ್ಲು ಹಾಕುತ್ತಾ ಇರುತ್ತಿದ್ದರು. ಇದೆಲ್ಲಾ ಹೆಣ್ಣುಮಕ್ಕಳ ವಿಚಾರಕ್ಕೆ ಮಾತ್ರ. ಯಾಕಂದರೆ ನಮ್ಮ ಮನೆಗಳಲ್ಲಿ ಗಂಡಸರು ಉಂಡ ತಟ್ಟೆಯನ್ನು ತೊಳೆಯುವ ಜಾಗದಲ್ಲಿ ಇಡುತ್ತಾರೆ ಅಂದರೆ ಅದೇ ಒಂದು ಮಹಾನ್ ಪ್ರಗತಿ.

ಇನ್ನು ಅಡುಗೆಮನೆಯಲ್ಲಿ ನಿಲ್ಲುವ ಹೆಣ್ಣುಮಕ್ಕಳ ಬಗ್ಗೆ ಅಮ್ಮಂದಿರು ಎಷ್ಟು ನಿಷ್ಠುರವಾಗಿ ನಡೆದುಕೊಳ್ಳುತ್ತಿದ್ದರು ಎಂದರೆ ಮಕ್ಕಳೇನಾದರೂ ಅನ್ನ ಮಾಡಿದರೆ ಕೆಲವು ಅಮ್ಮಂದಿರು ತಾವೇ ಮುಂಚೆ ಮಾಡಿಕೊಂಡಿದ್ದ ತಂಗಳು ಅನ್ನ ಉಂಡು ಕಾಲಕಳೆಯುತ್ತಿದ್ದರೇ ಹೊರತು ಅಪ್ಪಿತಪ್ಪಿಯೂ ನಾವು ಮಾಡಿದ ಅನ್ನ ಉಣ್ಣುತ್ತಿರಲಿಲ್ಲ. ಯಾಕೆ ಅಂತ ಕೇಳಿದರೆ, "ನಿಮಿಗೆ ಅಕ್ಕಿ ಚಪ್ಪರಿಸಕ್ಕೆ ಬರಲ್ಲ. ಕ್ಲೀನಾಗಿ ಅಕ್ಕಿ ತ್ವಳಿಯಲ್ಲ... ಆಟ ಆಡಿ ಬಂದು ಕೈ ಕ್ಲೀನಾಗಿ ತ್ವಳಕಂಡಿರಲ್ಲ" ಹೀಗೆ ಏನೇನೋ ಕಾರಣಗಳು.

ಇವರು ಮಾಡುವ ಅಡುಗೆ ಕೇಳಿ ನೋಡಿ ಕಲಿತುಕೊಳ್ಳೋಣ ಅಂತ ಹೋದರೆ ಭರ್ಜರಿ "ಅಂದಾಜು" ವ್ಯವಹಾರ ಮಾಡಿಸುವುದು. ಒಂದು ಅಥವಾ ಒಂದೂವರೆ ಪಾವು ಅಕ್ಕಿ, ಒಂದು ಮುಷ್ಟಿ ಅಥವಾ ಅದಕ್ಕಿಂತ ಸ್ವಲ್ಪ ಜಾಸ್ತಿ ಉದ್ದಿನ ಬೇಳೆ, ತಲೆ ಒಡ್ಡು ಒಂದು ಲೋಟ ಜ್ವಾಳ, ಮ್ಯಾಲೆ ನಾಕು ಕಾಳು ಹಂಗೇ ಹಾಕು – ಹೀಗೆಲ್ಲಾ ಕತ್ತಲಿನಲ್ಲಿ ದಾರಿ ತಪ್ಪಿಸುವ ಕ್ರಮಗಳನ್ನು ಹೇಳಿಬಿಡುವುದು. ಪಕ್ಕದಲ್ಲಿ ನಿಲ್ಲಿಸಿಕೊಂಡು ಅಡುಗೆ ಕಲಿಯಲು ಪ್ರಯತ್ನ ಪಟ್ಟರಂತೂ ಮುಗಿದೇ ಹೋಯಿತು ಕಥೆ. ಆಮೇಲೆ ಮಂದ ಉರಿಯಲ್ಲಿ ಹುರಿಯುವ ಕ್ರಮ, ಯಾವುದಾದ ಮೇಲೆ ಯಾವುದು ಹುರಿಯಬೇಕು ಎನ್ನುವುದು ಇನ್ನೊಂದು ಚೌಕಟ್ಟು. ಕಡೆಗೆ ಎಲ್ಲವೂ ಒಟ್ಟಿಗೇ ರುಬ್ಬುವುದು ಅನ್ನುವಾಗಲೂ ಈ ಕ್ರಮವನ್ನು ಮೀರುವಂತಿಲ್ಲ. ಕಡೆಗೆ ಹೊರಡುವ ರುಚಿ ಅಜ್ಜಿಯಂದಿರು ಅಮ್ಮಂದಿರದ್ದೇ ಸರ್ವ ಶ್ರೇಷ್ಠ ಅಂತ ಒಪ್ಪಿಕೊಳ್ಳುವಾಗ ನಮ್ಮ ಬಿಗುಮಾನವನ್ನು ನೀವು ನಿರ್ಲಕ್ಷಿಸಬೇಕು.

ಇನ್ನು ಇದನ್ನೆಲ್ಲಾ ಮೀರಿ ಹೇಗೋ ಯುದ್ಧ ಜಯಿಸಿ ನಮಗೆ ಬೇಕಾದ ಹಾಗೆ ಅಡುಗೆ ಮಾಡುವುದು ಕಲಿತರೆ ಇನ್ನೊಂದು ತಲೆ ನೋವು. "ಸರಿಯಾಗಿ ಹುರ್ದಿಲ್ಲ. ಸರಿಯಾಗಿ ಬೇಸಿಲ್ಲ. ಸರಿಯಾಗಿ ಪಾತ್ರೆ